ಸುಳ್ಯ ಕ್ಷೇತ್ರದಲ್ಲಿ ರಬ್ಬರ್ ಪ್ಲಾಂಟೇಷನ್

337- ಶ್ರೀ ಎಸ್. ಅಂಗಾರ (ಸುಳ್ಯ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಯಾವ ಯಾವ ರಬ್ಬರ್ ಪ್ಲಾಂಟೇಷನ್ ಸಬ್‌ಡಿವಿಜನ್ (ಉಪವಿಭಾಗದಲ್ಲಿ) ರಬ್ಬರ್ ಪ್ಲಾಂಟೇಷನ್ ಒಳಗಡೆ ಓಡಾಡಲು ಎಷ್ಟು ರಸ್ತೆಗಳಿವೆ, ಅದರ ದುರಸ್ತಿ ಕಾರ್ಯವನ್ನು ಯಾರು ಮಾಡುತ್ತಾರೆ?

ಆ) 1993-94, 1994-95ರ ಸಾಲಿನಲ್ಲಿ ಈ ರಸ್ತೆಗಳ ದುರಸ್ತಿಗೆ ಆದ ವೆಚ್ಚವೆಷ್ಟು(ಪೂರ್ಣ ವಿವರ ನೀಡುವುದು)?

ಶ್ರೀ ಹೆಚ್. ವೈ. ಮೇಟಿ (ಅರಣ್ಯ ಸಚಿವರು) :

ಅ) ಸುಳ್ಯ ಮತ್ತು ಐವರ್ನಾಡು ರಬ್ಬರ್ ವಿಭಾಗಗಳ ಹೆಚ್ಚಿನ ಪ್ರದೇಶವು ಸುಳ್ಯ ವಿಧಾನ ಸಭಾ ಕ್ಷೇತ್ರದಲ್ಲಿರುವುದರಿಂದ ಈ ವಿಭಾಗಗಳ ಪೂರ್ತಿ ರಸ್ತೆಯ ವಿವರಗಳನ್ನು ನೀಡಲಾಗಿದೆ.

ಎ) ಸುಳ್ಯ ರಬ್ಬರ್ ವಿಭಾಗ, ಸುಳ್ಯ : 87.448 ಕಿ.ಮೀ.

ಬಿ) ಐವರ್ನಾಡು ರಬ್ಬರ್ ವಿಭಾಗ, ಸುಳ್ಯ : 69.984 ಕಿ.ಮೀ.

ಸಿ) ರಬ್ಬರ್ ಮರುನಾಟಿಕೆ ಯೋಜನೆ, ಸೋಣಂಗೇರಿ : 15.266 ಕಿ.ಮೀ.

ಈ ರಸ್ತೆಗಳ ದುರಸ್ತಿ ಕಾರ್ಯವನ್ನು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ಮತಿಯಿಂದಲೇ ಮಾಡಿಸಲಾಗುತ್ತದೆ.

ಆ) 1993-94 ಮತ್ತು 1994-95ನೇ ಸಾಲಿನಲ್ಲಿ ಈ ರಸ್ತೆಗಳ ದುರಸ್ತಿಗೆ ತಗುಲಿದ ವೆಚ್ಚದ ವಿವರ ಈ ಕೆಳಗಿನಂತಿವೆ.

1993-94 ..... ರೂ. 9,66,314.34

1994-95 ..... ರೂ. 13,45,809.03

ರಬ್ಬರ್ ಪ್ಲಾಂಟೇಷನ್‌ನಲ್ಲಿ ವೀಡಿಂಗ್‌ಗೆ ತಗುಲಿದ ವೆಚ್ಚ

338- ಶ್ರೀ ಎಸ್. ಅಂಗಾರ (ಸೂಳ್ಯ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಬ್ಬರ್ ಪ್ಲಾಂಟೇಷನ್‌ನಲ್ಲಿ ಒಂದು ವರ್ಷದಲ್ಲಿ ಎಷ್ಟು ಬಾರಿ (ವೀಡಿಂಗ್) ಕಾಡು ತೆಗೆವುದು, ಮತ್ತು ಕಳೆ ತೆಗೆದಿದ್ದಕ್ಕೆ ಒಂದು ಬಾರಿಗೆ ತಗಲುವ ವೆಚ್ಚವೆಷ್ಟು.

ಆ) ಒಟ್ಟು ಎಷ್ಟು ಉಪ ವಿಭಾಗಗಳಲ್ಲಿ ವೀಡಿಂಗ್‌ಗಾಗಿ (ಕಳೆ ತೆಗೆಯಲು) ಎಷ್ಟು ಹಣ ಖರ್ಚಾಗುವುದು? (ವಿವರ ನೀಡುವುದು)

ಶ್ರೀ ಹೆಚ್. ವೈ. ಮೇಟಿ. (ಅರಣ್ಯ ಸಚಿವರು) :